

ರಾತ್ರಿಗಳು ಮತ್ತೆ ಮತ್ತೆ ಬಂದವು.

ನಾನು ಪಾಲಯಂನ ಜ್ಯೂಸ್ ಅಂಗಡಿಯ ಮುಂದೆ ಬೈಕ್ ನಿಲ್ಲಿಸಿದೆ. ಫಾಲೂಢ ಅಂದರೆ ಮಗಳಿಗೆ ತುಂಬಾ ಇಷ್ಟ. ಪ್ರಿಯಾ ಐಸ್ ಕ್ರೀಂ ಹುಚ್ಚಿ.

'ಕೋಪವೆಲ್ಲ ಹೋಯಿತಾ ಮನೋಜ್' ಪ್ರಿಯಾ ನನ್ನನ್ನು ತಣ್ಣಗಾಗಿಸಲು ಪ್ರಶ್ನಿಸಿದಳು. ಹತ್ತು ಐಸ್ ಕ್ರೀಂಗಳನ್ನು ಒಟ್ಟಿಗೆ ತಿಂದಷ್ಟು ನಾನು ತಣ್ಣಗಾದೆ. ಐಸ್ ಕ್ರೀಂಗೆ ಆರ್ಡರ್ ಮಾಡಿ ಸ್ವಲ್ಪ ಹೊತ್ತು ಮೌನಕ್ಕೆ ಶರಣಾದೆ.

ಪಾಪ ಪ್ರಿಯಾ! ನಾವಿಬ್ಬರೂ ಒಂದೇ ಊರಿನವರು. ನನ್ನಲ್ಲಿ ಏನು ಕಂಡು ನನ್ನನ್ನು ಮದುವೆಯಾದಳೋ? ಆ ಪ್ರಶ್ನೆಯನ್ನು ನಾನು ಅವಳ ಮುಂದಿಟ್ಟಾಗ ಅವಳ ಉತ್ತರ ನಗುವೊಂದೆ. ಹಾಗೆ ನೋಡಿದರೆ ನಾನು ಅವಳಿಗೆ ಕೊಟ್ಟಿದ್ದು ಬರೇ ಕಷ್ಟಗಳು, ದುರಂತಗಳು. ಒಬ್ಬ ಡಿಪಿಟಿಯವನಿಗೆ ತಿಂಗಳಿಗೆ ಎಷ್ಟು ವರಮಾನವಿರಬಹುದೆಂದು ಯಾರು ಬೇಕಾದರೂ ಊಹಿಸಬಹುದು. ಬಟ್ಟೆ ಅಂಗಡಿಯಲ್ಲಿ ದಿನವಿಡೀ ನಿಂತು, ಗ್ರಾಹಕರೊಂದಿಗೆ ಚರ್ಚಿಸಿ ಅವಳ ಕಾಲುಗಳಿಗೆ ಊತ ಬರತೊಡಗಿದೆ.

ಬದುಕಿನ ಕಥೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಬರೆಯುತ್ತಾರೆ. ಪೋಥಿಸ್‌ನ ಗೆಳತಿಯರಿಂದ ಹತ್ತು ಸಾವಿರ ಸಾಲ ಪಡೆದುಕೊಂಡು ಪ್ರಕಾಶಕನ ಲೆಕ್ಕಕ್ಕೆ ಗೂಗಲ್ ಮಾಡಿದ್ದಳು. ಮೊಬೈಲ್‌ನ ಆಚೆ ತುದಿಯಿಂದ ಪ್ರಕಾಶಕನ ನಗು ಕೇಳಿಸಿತು. ಇಷ್ಟೆಲ್ಲ ಕೊಟ್ಟು ಮಾಡಿ, ಒಂದು ಸಣ್ಣ ಮೊತ್ತ ಸಂಭಾವನೆಯಾಗಿ ಬಂದರೆ ಎಷ್ಟು ಚೆನ್ನಾಗಿತ್ತು. ಅದರೆ ಆ ನಂಬಿಕೆ ಕೂಡ ಹುಸಿಯಾಗುವ ಲಕ್ಷಣ ಕಾಣಿಸುತ್ತಿದೆ. ಡಿಟಿಪಿ ನಾನೇ ಮಾಡಿದ್ದರಿಂದ ಆ ಖರ್ಚು ಉಳಿದಿದೆ. ಮುಖಚಿತ್ರಕ್ಕೂ ನನ್ನದೇ ಖರ್ಚು.

ಇದೇ ಹಣದಲ್ಲಿ ಪ್ರಿಯಾಳಿಗೂ ಮಗಳಿಗೂ ಒಂದು ಸವರನ್ ಬಂಗಾರ ಕೊಳ್ಳಬಹುದಿತ್ತು. ಬಂಗಾರಕ್ಕಿಂತಲೂ ಹಿರಿದೇನು ಕಥೆ? ಹೀಗೆ ಹಲವಾರು ಯೋಚನೆಗಳಲ್ಲಿ ಮುಳುಗಿದಂತೆ ದಿಢೀರನೆ ಎದ್ದು ಡಿಟಿಪಿ ಸೆಂಟರಿನಿಂದ ಹೊರಬಂದೆ. ಒಂದು ಸಿಗರೇಟು ಹಚ್ಚಿ ಯೋಚನೆಗೊಳಗಾದೆ. ಇತ್ತೀಚೆಗೆ ಸಿಗರೇಟು ಸಂಖ್ಯೆಯು ಹೆಚ್ಚಾಗುತ್ತಿದೆ.

ಪುಸ್ತಕ ಮುದ್ರಣಾಲಯಕ್ಕೆ ಹೋಗಿದೆಯೆಂದು